Societies Financed by the D.C.C. Bank Chitradurga

276 (167) SRI K.H. RANGANATH (Hiriyur).—Will the Minister for Co-operation be pleased to state :—

(a) the names of the Presidents of the Chitradurga D.C.C. Bank who were holding the post since 1961 to date and the respective periods they held the office ;

(b) the over dues, the advances made during 1980-81, 1981-82 and 1982-83 for various types of credits in the District, the recoveries made, the balances due (Talukwise figures to be furnished) ;

(c) the complaints of Benami loans received and the action taken (talukwise figures to be furnished) ;

(d) the total number of Societies financed by the D.C.C. Bank, Nationalised Banks, Apex Bank and the reason for not financing all the Societies by the D.C.C. Bank ?

ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೫೬ನೇ ಇಸವಿಯ ಕರ್ನಾಟಕ ರಾಜ್ಯ ಖಾದಿ ಹಾಗೂ ಗ್ರಾಮೋದ್ಯೋಗ ಶಾಸನದ ೨೬ನೇ ಕಲಮಿನ ಮೇರೆಗೆ ಹೊರಡಿಸಲಾದ (೧) ೧೯೭೯-೮೦ನೇ ಸಾಲಿನ ಕರ್ನಾಟಕ ರಾಜ್ಯದ ಖಾದಿ ಹಾಗೂ ಗ್ರಾಮೋದ್ಯೋಗ ಮಂಡಲಿಯ ವಾರ್ಷಿಕ ವರದಿ.

(೨) ೧೯೮೦-೮೧ನೇ ಹಾಗೂ ೧೯೮೧-೧೯೮೨ನೇ ಸಾಲುಗಳ ಕರ್ನಾಟಕ ರಾಜ್ಯದ ಖಾದಿ ಹಾಗೂ ಗ್ರಾಮೋದ್ಯೋಗ ಮಂಡಲಿಯ ವಾರ್ಷಿಕ ವರದಿಯಿಂದಿಗೆ ೧೯೭೯-೮೦ನೇ ಹಾಗೂ ೧೯೮೦-೮೧ನೇ ಸಾಲುಗಳ ತನಿಖಾ ವರದಿಯನ್ನು ಹಾಗೂ

(೩) ೧೯೮೨-೮೩ನೇ ಸಾಲಿನ ಕರ್ನಾಟಕ ರಾಜ್ಯದ ಖಾದಿ ಹಾಗೂ ಗ್ರಾಮೋದ್ಯೋಗ ಮಂಡಲಿಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಚುನಾವಣಾ ಪ್ರಸ್ತಾವ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧) (೧೪)ನೇ ಕಲಮಿನ ಅವಕಾಶದ ಮೇರೆಗೆ ಏಕಲ ಸಂಕ್ರಮಣೀಯ ಮತದ ಪ್ರಕಾರ ಪ್ರಮಾಣಾನುಸಾರ ಪ್ರಾತಿನಿಧ್ಯದ ನಿಯಮಗಳಿಗನುಸಾರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಮಂದಿ ಸದಸ್ಯರನ್ನು ಚುನಾಯಿಸ ಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು.—೧೯೭೬ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧) (೧೪)ನೇ ಕಲಮಿನ ಅವಕಾಶದ ಮೇರೆಗೆ ಏಕಲ ಸಂಕ್ರಮಣೀಯ ಮತದ ಪ್ರಕಾರ

ಪ್ರಮಾಣಾನುಸಾರ ಪ್ರಾತಿನಿಧ್ಯದ ನಿಯಮಗಳಿಗನುಸಾರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಮಂದಿ ಸದಸ್ಯರನ್ನು ಚುನಾಯಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಗಮನ ಸೆಳೆಯುವ ಸೂಚನೆ

ತೀರ್ಥಹಳ್ಳಿ ತಾಲ್ಲೂಕಿನ ಶೇಡಗಾರ ಗ್ರಾಮದ ಶ್ರೀ ರಾಮನಾಯ್ಕರ ಮನೆಯಲ್ಲಿ ನಡೆದ ಕೊಲೆಯ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೭ನೇ ಮೇ ೧೯೮೩ ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ, ಶೇಡ್‌ಗಾರ್ ಗ್ರಾಮದ ಶ್ರೀ ರಾಮನಾಯ್ಕ ಅವರ ಮನೆಯಲ್ಲಿ ನಡೆದ ಕೊಲೆಯ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಇತ್ತೀಚೆಗೆ ನಡೆದ ಮಹತ್ವದ ಘಟನೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಹುದು. ಆದರೆ ಈ ಘಟನೆ ಇತ್ತೀಚೆಗೆ ನಡೆದದ್ದು ಅಲ್ಲ, ಮೇ ತಿಂಗಳಲ್ಲಿ ಆದಂಥ ಘಟನೆ ಇದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಬಹಳ ಕಷ್ಟಪಟ್ಟು ತರಿಸಿದ್ದಾರೆ. ಈ ಪರಿಸ್ಥಿತಿಗೆ ಬರಬೇಕಾದರೆ ಬಹಳ ಕಷ್ಟಪಟ್ಟಿರಬಹುದು. ಅವರು ಈ ವಿಷಯವನ್ನು ಪ್ರತಿದಿವಸವೂ ಎತ್ತುತ್ತಾ ಇದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಇತ್ತೀಚೆಗೆ ನಡೆದ ಘಟನೆ ಎಂದು ಇದೆ, ಆಗಲಿ. ಮಾನ್ಯ ಅಧ್ಯಕ್ಷರೆ ನಾನು ಈ ಒಂದು ಹೇಳಿಕೆಯನ್ನು ಕೊಡುತ್ತೇನೆ.

ದಿನಾಂಕ ೨೮.೫.೧೯೮೩ರ ಬೆಳಿಗ್ಗೆ ಸುಮಾರು ೮ ಗಂಟೆಗೆ ತೀರ್ಥಹಳ್ಳಿ ತಾಲ್ಲೂಕು ಶೇಡಗಾರ್ ಗ್ರಾಮದ ಶ್ರೀ ರಾಮನಾಯ್ಕ ಎಂಬುವರ ಮನೆಗೆ ಬೆಂಕಿ ಬಿದ್ದಿದೆ ಎಂದು ಮಳೂರು ಪೋಲೀಸ್ ಠಾಣೆಗೆ ವರ್ತಮಾನ ಬಂದಿತು, ಕೂಡಲೇ ಪೋಲೀಸರು ಸ್ಥಳಕ್ಕೆ ಧಾವಿಸಿದರು. ಅವರು ಅಲ್ಲಿಗೆ ತಲುಪಿದಾಗ ಮನೆ ಉರಿಯುತ್ತಿತ್ತು, ಮತ್ತು ಸ್ಥಳದಲ್ಲಿ ಇಬ್ಬರು ಹುಡುಗರು ಪ್ರಜ್ಞಾಶೂನ್ಯರಾಗಿ ಮನೆಯ ಹೊರಗೆ ಬಿದ್ದಿದ್ದರು. ಪೋಲೀಸರು ಗ್ರಾಮಸ್ಥರ ಸಹಾಯದಿಂದ ಬೆಂಕಿಯನ್ನು ಆರಿಸಿ ಮನೆಗೊಳಗೆ ಪ್ರವೇಶಿಸಿದಾಗ ಶ್ರೀ ರಾಮನಾಯ್ಕರ ಹೆಂಡತಿಯ ಮತ್ತು ಮಗನ ಸುಟ್ಟು ಹೋದ ಮೃತ ಶರೀರಗಳು ಕಂಡು ಬಂದವು. ಪೋಲೀಸರು ಮೃತ ಶರೀರಗಳ ಮರಣೋತ್ತರ ಪರೀಕ್ಷೆ ಮಾಡಿಸಿದ್ದಾರೆ.

೨. ಶೇಡಗಾರ್ ಗ್ರಾಮದ ಸರ್ವೆ ನಂ. ೬/೨ರಲ್ಲಿರುವ ೨ ಎಕರೆ ೧೫ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಶ್ರೀಯುತ ಚಂದ್ರಪ್ಪ ಗೌಡ ಮತ್ತು ಶ್ರೀಕೃಷ್ಣಪ್ಪ ಗೌಡ ಇವರೊಡನೆ ತನಗೆ ಜಮೀನು ವಿವಾದ ಇತ್ತೆಂದೂ ಮತ್ತು ಈ ಬೆಂಕಿಯ ಘಟನೆಯಲ್ಲಿ ಇವರ ಕೈವಾಡ ಇದೆ ಎಂದು ಶ್ರೀ ರಾಮಾನಾಯ್ಕರು ಸಂಶಯ ವ್ಯಕ್ತಪಡಿಸಿದರು ಅವರ ಕಡೆಯಿಂದ ದೂರು ತೆಗೆದುಕೊಂಡು ಮಳೂರು ಪೋಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆ ಕಲಂ ೪೪೭, ೩೨೪, ೩೨೬, ೫೦೨, ೪೫೬ ಮತ್ತು ೩೪ರ ಪ್ರಕಾರ ಮೊಕದ್ದಮೆ ನಂ. ೩೨/೮೩ ದಾಖಲು ಮಾಡಿಕೊಳ್ಳಲಾಯಿತು. ಸರ್ಕಲ್ ಇನ್ಸ್‌ಪೆಕ್ಟರ್‌ರವರು ತನಿಖೆಯನ್ನು ವಹಿಸಿಕೊಂಡು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರ್ ಪಡಿಸಿದರು. ಅವರನ್ನು ನ್ಯಾಯಿತ ಅಭಿರಕ್ಷೆಗೆ ಒಪ್ಪಿಸಲಾಗಿದೆ. ಮುಂದಿನ ತಪಾಸಣೆಯನ್ನು ಶಿವಮೊಗ್ಗದ ಸಬ್ ಡಿವಿಜನಲ್ ಪೋಲೀಸ್ ಅಧಿಕಾರಿ ವಹಿಸಿಕೊಂಡಿದ್ದಾರೆ, ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿಯನ್ನು ಈಗಾಗಲೇ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ.

೩. ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ೧೦,೦೦೦ ರೂಪಾಯಿಗಳನ್ನು ಪರಿಹಾರ ರೂಪವಾಗಿ ಶ್ರೀ ರಾಮಾನಾಯ್ಕ ಇವರಿಗೆ ಕೊಡಲಾಗಿದೆ. ಇದರ ಹೊರತಾಗಿ ಮಾನ್ಯ ಈ ಸದನದ